Office of the Principal Director
Karnataka State Audit and Accounts Department,
T.T.M.C Building, 'A' Block,
3rd Floor, B.M.T.C,
Shanthinagara, Bangalore-560027
Phone No:- 080- 22215273
Fax No.:- 080- 22216500
E-mail: controllerstateaccounts@yahoo.com

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ

ಪ್ರಧಾನ ನಿರ್ದೇಶಕರ ಕಚೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ, 'ಎ' ಬ್ಲಾಕ್,
3ನೇ ಮಹಡಿ, ಬಿ.ಎಂ.ಟಿ.ಸಿ,
ಶಾಂತಿನಗರ, ಬೆಂಗಳೂರು-560027
ದೂರವಾಣಿ ಸಂಖ್ಯೆ:- 080- 22215273
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್:controllerstateaccounts@yahoo.com

**ಸಂಖ್ಯೆ: ರಾಲೆಪ 17 ಸಿದ್ವಿಪಘೋ 2020** / 538 **ದಿನಾಂಕ: 08.08.2023**

## ಅಧಿಕೃತ ಜ್ಞಾಪನ

**ವಿಷಯ:** **ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಲೆಕ್ಕಸಹಾಯಕರುಗಳ ಪರೀಕ್ಷತಾ ಅವಧಿಯನ್ನು ಘೋಷಿಸುವ ಬಗ್ಗೆ.**

**ಉಲ್ಲೇಖ:**
1. **ಕರ್ನಾಟಕ ನಾಗರಿಕ ಸೇವಾ (ಪರೀಕ್ಷತಾ) ನಿಯಮಾವಳಿ 1977ರ ನಿಯಮಗಳು**
2. **ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ರಾಲೆಪ 07 ಸಿದ್ವಿನೇ 2017 (ಕೆಪಿಎಸ್‌ಸಿ) ಭಾಗ-ii/347, ದಿನಾಂಕ: 01.07.2020.**
3. **ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ರಾಲೆಪ 01 ಸಿದ್ವಿನೇ 2020 (ಕೆಪಿಎಸ್‌ಸಿ) /531, ದಿನಾಂಕ: 02.07.2021.**

*****

**ಪ್ರಸ್ತಾವನೆ:**

ಕರ್ನಾಟಕ ಲೋಕಸೇವಾ ಆಯೋಗದಿಂದ ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ಆಯ್ಕೆಯಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಹಂಚಿಕೆಯಾಗಿದ್ದು, ಉಲ್ಲೇಖ(2) ಮತ್ತು (3) ಈ ಕಛೇರಿಯ ಅಧಿಕೃತ ಜ್ಞಾಪನಗಳನ್ವಯ ನಿಯೋಜಿತ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವ 04 ಕಿರಿಯ ಲೆಕ್ಕಸಹಾಯಕರುಗಳು ಎರಡು ವರ್ಷಗಳ ಪರೀಕ್ಷತಾ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಸದರಿ ನೌಕರರುಗಳು ಅಕೌಂಟ್ಸ್ ಲೋಯರ್/ಹೈಯರ್ ಇಲಾಖಾ ಪರೀಕ್ಷೆಯಲ್ಲಿ ಮತ್ತು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) 2012ರನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ನೌಕರರು ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ವ್ಯಾಸಂಗ ಮಾಡಿರುವ ಕಾರಣ ಕರ್ನಾಟಕ ನಾಗರಿಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಾವಳಿಗಳು 1974ರ ನಿಯಮ 5(5)ರನ್ವಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆದಿರುತ್ತಾರೆ ಹಾಗೂ ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2011 ಮತ್ತು ತಿದ್ದುಪಡಿ ನಿಯಮಗಳು 2015ರಲ್ಲಿ ನಿಗದಿಪಡಿಸಿರುವ ಅಗತ್ಯ ತರಬೇತಿಗಳನ್ನು ಪೂರೈಸಿರುತ್ತಾರೆ.

ಸದರಿ ನೌಕರರುಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾ ಇರುವುದಿಲ್ಲ ಹಾಗೂ ಕಛೇರಿ ಮುಖ್ಯಸ್ಥರು ನೀಡಿರುವ ವರದಿಗಳನ್ವಯ ಸದರಿ ನೌಕರರುಗಳ ಸೇವೆಯು ತೃಪ್ತಿಕರವಾಗಿರುವುದು ಕಂಡುಬಂದಿರುತ್ತದೆ. ಪರೀಕ್ಷತಾ ಅವಧಿಯಲ್ಲಿ ಅಮಾನತ್ತಿನಲ್ಲಾಗಲೀ ಅಥವಾ ಸದರಿ ನೌಕರರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರುವುದಿಲ್ಲ ಮತ್ತು ಸದರಿಯವರುಗಳು ಅಸಾಧಾರಣ ರಜೆ ಪಡೆದಿರುವುದಿಲ್ಲ ಎಂದು ಸದರಿ ನೌಕರರುಗಳ ಮೇಲಾಧಿಕಾರಿಗಳು ವರದಿ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, 04 ಕಿರಿಯ ಲೆಕ್ಕ ಸಹಾಯಕರುಗಳ ಪೈಕಿ ಕ್ರ.ಸಂ(1)ರಲ್ಲಿ ಸೂಚಿಸಿರುವ ನೌಕರರು ಕಿರಿಯ ಲೆಕ್ಕ ಸಹಾಯಕರ ಹುದ್ದೆಗೆ ನಿಗಧಿಪಡಿಸಿದ ಅಕೌಂಟ್ಸ್ ಲೋಯರ್/ಹೈಯರ್ ಇಲಾಖಾ ಪರೀಕ್ಷೆಯನ್ನು 2021ನೇ ಸಾಲಿನ 1ನೇ ಅಧಿವೇಶನದಲ್ಲಿ ಉತ್ತೀರ್ಣರಾಗಿದ್ದು, ಅಂಕಣ(5)ರಲ್ಲಿ ತಿಳಿಸಿರುವ ದಿನಾಂಕದಂದು ರಾಜ್ಯಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಆದ್ದರಿಂದ ಸದರಿ ನೌಕರರ ಪರೀಕ್ಷತಾವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ನಿಯಮಾವಳಿಗಳು 1977ರ ನಿಯಮ 4(1)(ii)ರನ್ವಯ ಅಂಕಣ(4)ರಲ್ಲಿ ತಿಳಿಸಿರುವ ದಿನಾಂಕದವರೆಗೂ ವಿಸ್ತರಿಸಿ, ಸದರಿ ನಿಯಮ 5(1)(ಎ) ರನ್ವಯ ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಬೇಕಾಗಿರುತ್ತದೆ. ಇನ್ನುಳಿದ 03 ಕಿರಿಯ ಲೆಕ್ಕ ಸಹಾಯಕರುಗಳ ಪರೀಕ್ಷತಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ನಿಯಮಾವಳಿಗಳು 1977ರ ನಿಯಮ 5(1)(ಎ) ರನ್ವಯ ಅಂಕಣ ಸಂಖ್ಯೆ (4) ರಲ್ಲಿ ತಿಳಿಸಿರುವ ದಿನಾಂಕದಂದು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಬೇಕಾಗಿರುತ್ತದೆ. ಆದ್ದರಿಂದ ಈ ಆದೇಶ.

--2

## ::ಆದೇಶ::

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕ್ರ.ಸಂ(1) ರಲ್ಲಿ ತಿಳಿಸಿರುವ ಶ್ರೀಮತಿ ಸೌಜನ್ಯ. ಎಂ, ಕಿರಿಯ ಲೆಕ್ಕ ಸಹಾಯಕರ ಪರೀಕ್ಷತಾ ಅವಧಿಯನ್ನು ಅಂಕಣ(4)ರಲ್ಲಿ ತಿಳಿಸಿರುವ ದಿನಾಂಕದವರೆಗೆ ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ನಿಯಮಾವಳಿಗಳು 1977ರ ನಿಯಮ 4(1)(ii)ರನ್ವಯ ವಿಸ್ತರಿಸಿ, ಸದರಿ ನಿಯಮ 5(1)(ಎ)ರನ್ವಯ ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿದೆ. ಇನ್ನುಳಿದ 03 ಕಿರಿಯ ಲೆಕ್ಕ ಸಹಾಯಕರುಗಳು ಪರೀಕ್ಷತಾವಧಿಯನ್ನು ಅವರ ಹೆಸರುಗಳ ಮುಂದೆ ಅಂಕಣ (4) ರಲ್ಲಿ ನಮೂದಿಸಿದ ದಿನಾಂಕದಂದು ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ನಿಯಮಾವಳಿಗಳು 1977ರ ನಿಯಮ 5(1)(ಎ)ರನ್ವಯ ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿದೆ.

| ಕ್ರ. ಸಂ. | ನೌಕರರ ಹೆಸರು ಮತ್ತು ಕಾರ್ಯನಿರ್ವಹಿರುತ್ತಿರುವ ಕಛೇರಿ ವಿಳಾಸ ಶ್ರೀ/ಶ್ರೀಮತಿ | ಕಿರಿಯ ಲೆಕ್ಕ ಸಹಾಯಕರಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | ಎರಡು ವರ್ಷಗಳ ಪರೀಕ್ಷತಾ ಅವಧಿ ಘೋಷಿಸಿದ ದಿನಾಂಕ | ಇಲಾಖಾ ಪರೀಕ್ಷಾ ಫಲಿತಾಂಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ. |
|---|---|---|---|---|
| 1 | 2 | 3 | 4 | 5 |
| 1. | ಸೌಜನ್ಯ. ಎಂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್, ಮೈಸೂರು. | 16.07.2020 ಅಪರಾಹ್ನ | 05.01.2023 ಅಪರಾಹ್ನ | 05.01.2023 |
| 2. | ಅವಿನಾಶ ನಾಯಕ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು. | 12.07.2021 ಪೂರ್ವಾಹ್ನ | 11.07.2023 ಅಪರಾಹ್ನ | |
| 3. | ಪ್ರಕಾಶ ದುಂಡಪ್ಪ ಕುಂಕೂರ, ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೆಳಗಾವಿ | 16.07.2021 ಪೂರ್ವಾಹ್ನ | 15.07.2023 ಅಪರಾಹ್ನ | |
| 4. | ವೆಂಕಟೇಶ ಟಿ.ಕೆ, ಹಿರಿಯ ಉಪನಿರ್ದೇಶಕರ ಕಚೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯ. | 14.07.2021 ಪೂರ್ವಾಹ್ನ | 13.07.2023 ಅಪರಾಹ್ನ | |

**ಪ್ರಧಾನ ನಿರ್ದೇಶಕರು**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ**
**ಮತ್ತು ಲೆಕ್ಕಪತ್ರ ಇಲಾಖೆ,**
**ಬೆಂಗಳೂರು.**

ಪ್ರತಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು - ಶ್ರೀಮತಿ ಸೌಜನ್ಯ. ಎಂ ಕಿರಿಯ ಲೆಕ್ಕ ಸಹಾಯಕರು, ಇವರ ಪರೀಕ್ಷತಾವಧಿ ಘೋಷಣೆಯ ಮಾಹಿತಿಯನ್ನು ಸೇವಾಪುಸ್ತಕದಲ್ಲಿ ನಮೂದಿಸಿ ಧೃಢೀಕರಿಸಲು ಕೋರುತ್ತಾ, ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.

2. ಕಾರ್ಯನಿರ್ವಾಹಕ ಅಧಿಕಾರಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೆಳಗಾವಿ - ಇವರಿಗೆ ಶ್ರೀ ಪ್ರಕಾಶ ದುಂಡಪ್ಪ ಕುಂಕೂರ, ಕಿರಿಯ ಲೆಕ್ಕ ಸಹಾಯಕರು, ಇವರ ಪರೀಕ್ಷತಾವಧಿ ಘೋಷಣೆಯ ಮಾಹಿತಿಯನ್ನು ಸೇವಾಪುಸ್ತಕದಲ್ಲಿ ನಮೂದಿಸಿ ಧೃಢೀಕರಿಸಲು ಕೋರುತ್ತಾ, ನೌಕರರ ಸೇವಾ ಪುಸ್ತಕ ವನ್ನು ಲಗತ್ತಿಸಿ ಕಳುಹಿಸಿದೆ.
3. ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯ- ಇವರಿಗೆ ಶ್ರೀ ವೆಂಕಟೇಶ ಟಿ.ಕೆ, ಕಿರಿಯ ಲೆಕ್ಕ ಸಹಾಯಕರು, ಇವರ ಪರೀಕ್ಷತಾವಧಿ ಘೋಷಣೆಯ ಮಾಹಿತಿಯನ್ನು ಸೇವಾಪುಸ್ತಕದಲ್ಲಿ ನಮೂದಿಸಿ ಧೃಢೀಕರಿಸಲು ಕೋರುತ್ತಾ, ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
4. ರಿಂದ (7) ಸಂಬಂಧಪಟ್ಟ ನೌಕರರಿಗೆ ಕಛೇರಿ ಮೂಲಕ.
8. ರಿಂದ (11) ನೌಕರರ ಸೇವಾ ಪುಸ್ತಕಕ್ಕೆ.
12. ರಿಂದ (15) ವೈಯಕ್ತಿಕ ಕಡತಗಳಿಗೆ.
16. ಕಛೇರಿ ಅಧಿಕೃತ ಜ್ಞಾಪನ ಪುಸ್ತಕಕ್ಕೆ.
17. ಕಛೇರಿ ಅಧಿಕೃತ ಜ್ಞಾಪನ ಕಡತಕ್ಕೆ.
18. ಕಛೇರಿ ಪ್ರತಿ.